# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **:** | **368** |
| **ಮಾನ್ಯ ಸದಸ್ಯರ ಹೆಸರು** | **:** | **ಶ್ರೀ ಗೋವಿಂದ ರಾಜು (ವಿಧಾನ ಸಭಾ ಕ್ಷೇತ್ರ)** |
| **ಉತ್ತರಿಸುವ ದಿನಾಂಕ** | **:** | **29.01.2026** |
| **ಉತ್ತರಿಸುವ ಸಚಿವರು** | **:** | **ಗೃಹ ಸಚಿವರು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಿಂದ ಇಲ್ಲಿಯವರೆಗೂ ರಾಜ್ಯದಲ್ಲಿ ಎಷ್ಟು ಸೈಬರ್ ವಂಚನೆ ಪ್ರಕರಣಗಳು ದಾಖಲಾಗಿವೆ; ಎಷ್ಟು ಸೈಬರ್ ವಂಚಕರನ್ನು ಬಂಧಿಸಲಾಗಿದೆ; | ರಾಜ್ಯದಲ್ಲಿ ಮೂರು ವರ್ಷದಲ್ಲಿ ದಾಖಲಾಗಿರುವ ಸೈಬರ್ ಅಪರಾಧ ಪ್ರಕರಣಗಳು ಮತ್ತು ಬಂಧಿಸಲಾದ ಆರೋಪಿಗಳ ಸಂಖ್ಯೆ ಈ ಕೆಳಕಂಡಂತಿದೆ:- |

| ವರ್ಷ | ದಾಖಲಿಸಿರುವ ಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆ | ಬಂಧಿಸಲಾದ ಆರೋಪಿಗಳ ಸಂಖ್ಯೆ |
|---|---|---|
| 2023 | 22255 | 1097 |
| 2024 | 22482 | 1017 |
| 2025 | 14889 | 695 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | 2024ರ ವರ್ಷದಲ್ಲಿ ರಾಜ್ಯದ ವಿವಿಧ ಬ್ಯಾಂಕುಗಳಿಂದ 2,914.97 ಕೋಟಿ ರೂ. ಸೈಬರ್ ಖಾತೆಗಳಿಗೆ ವರ್ಗಾವಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಬ್ಯಾಂಕ್‌ಗಳ ವಿವರಗಳನ್ನು ಒದಗಿಸುವುದು; | ರಾಜ್ಯದಲ್ಲಿ ಸೈಬರ್ ಅಪರಾಧ ಪ್ರಕರಣಗಳಲಿ 2024ನೇ ಸಾಲಿನಲ್ಲಿ ರೂ. 3,263,34,25,013/-ಗಳ ವಂಚನೆಯಾಗಿದ್ದು, ಸದರಿ ಮೊತ್ತದಲ್ಲಿ ರೂ.332,14,63,270/-ಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ.<br><br>ಸೈಬರ್ ಖಾತೆಗಳಿಗೆ ಹಣ ವರ್ಗಾವಣೆಯಾಗಿರುವ ಬ್ಯಾಂಕ್‌ಗಳ ವಿವರವನ್ನು ಈ ಕೆಳಕಂಡಂತೆ ವಿವರಿಸಲಾಗಿದೆ:- |

**DETAILS OF BANKS ( Cyber Amount Transaction Done)**

| SL No | Name of Banks |
|---|---|
| 1. | State Bank of India |
| 2. | Canara Bank |
| 3. | Bank of Baroda |
| 4. | Punjab National Bank |
| 5. | Bank of India |
| 6. | Indian Bank |
| 7. | Union Bank of India |

<table>
<tr>
<td></td>
<td></td>
<td>
<table>
<tr><td>8.</td><td>Bank of Maharashtra</td></tr>
<tr><td>9.</td><td>UCO Bank</td></tr>
<tr><td>10.</td><td>Central Bank of India</td></tr>
<tr><td>11.</td><td>Indian Overseas Bank</td></tr>
<tr><td>12.</td><td>Punjab & Sind Bank</td></tr>
</table>
</td>
</tr>
<tr>
<td>ಇ)</td>
<td>ಬೆಂಗಳೂರಿನಲ್ಲಿ ಅತಿ ಹೆಚ್ಚು ಸೈಬರ್ ವಂಚನೆ ಪ್ರಕರಣ ದಾಖಲಾಗಿದ್ದು, ವಿವಿಧ ಸೈಬರ್ ಪೊಲೀಸ್ ಠಾಣೆ ಸೇರಿ ಒಟ್ಟು 4,902 ಎಫ್ಐಆರ್ ದಾಖಲಾಗಿರುವುದು ನಿಜವೇ; ಹಾಗಿದ್ದಲ್ಲಿ, ವಂಚನೆಗೆ ಒಳಗಾದ ಜನರಿಗೆ ಎಷ್ಟು ಹಣವನ್ನು ಹಿಂತಿರುಗಿಸಲಾಗಿರುತ್ತದೆ;</td>
<td>ಬೆಂಗಳೂರು ನಗರದಲ್ಲಿ 2023ನೇ ಸಾಲಿನಿಂದ 2026 ರವರೆಗೆ (15.01.2026) ದಾಖಲಾಗಿರುವ ಸೈಬರ್ ಪ್ರಕರಣಗಳ ಮಾಹಿತಿ, ಸೈಬರ್ ವಂಚನೆಯ ಮೊತ್ತ, ರಿಕವರಿಯಾದ ಮೊತ್ತ ಹಾಗೂ ಹಿಂದಿರುಗಿಸಲಾದ ಮೊತ್ತದ ವಿವರಗಳು ಈ ಕೆಳಕಂಡಂತಿವೆ:-
<table>
<tr><th>ವರ್ಷ</th><th>ಸೈಬರ್ ಪ್ರಕರಣಗಳ ಸಂಖ್ಯೆ</th><th>ಸೈಬರ್ ವಂಚನೆಯ ಮೊತ್ತ ₹</th><th>ಸೈಬರ್ ವಂಚನೆಗೊಳಪಟ್ಟ ಮೊತ್ತದಲ್ಲಿ ರಿಕವರಿಯಾದ ಮೊತ್ತ ₹</th><th>ಹಿಂದಿರುಗಿಸಲಾದ ಮೊತ್ತ ₹</th></tr>
<tr><td>2023</td><td>17697</td><td>6,80,94,26,152</td><td>90,31,33,406</td><td>88,86,28,129</td></tr>
<tr><td>2024</td><td>17692</td><td>18,41,73,30,549</td><td>1,88,82,06,399</td><td>1,56,37,27,390</td></tr>
<tr><td>2025</td><td>10498</td><td>17,56,64,62,659</td><td>81,48,82,580</td><td>57,29,33,859</td></tr>
</table>
</td>
</tr>
<tr>
<td>ಈ)</td>
<td>ಸಾರ್ವಜನಿಕರು ಸೈಬರ್ ವಂಚನೆಗೆ ಒಳಗಾಗುವುದನ್ನು ತಡೆಯಲು ಸರ್ಕಾರದಿಂದ ತೆಗೆದುಕೊಂಡ ಮುಂಜಾಗ್ರತಾ ಕ್ರಮಗಳೇನು?</td>
<td>ಸೈಬರ್ ಅಪರಾಧ, ಆನ್‌ಲೈನ್ ಮೋಸ ಮತ್ತು ಇನ್ನಿತರೇ ಆನ್‌ಲೈನ್ ಅಪರಾಧಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿದೆ:-<br><br>
❖ ರೇಡಿಯೋ, ಟಿ.ವಿ. ಸಾಮಾಜಿಕ ಜಾಲತಾಣಗಳ ಮೂಲಕ OTP ಸುರಕ್ಷತೆ, ವಂಚನೆ ಎಚ್ಚರಿಕೆ, ಡಿಜಿಟಲ್ ಹೈಜಿನ್ ಕುರಿತು ಪ್ರಚಾರ ಮಾಡಲಾಗುತ್ತಿದೆ.<br><br>
❖ ಸಮುದಾಯ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸುವ "ಮನೆ ಮನೆಗೆ ಪೊಲೀಸ್" ಕಾರ್ಯಕ್ರಮದಡಿಯಲ್ಲಿ ಸಕ್ರಿಯ ಸೇವೆ ಮುಖಾಂತರ ಸೈಬರ್ ಜಾಗೃತಿ ಮೂಡಿಸಲಾಗುತ್ತಿದೆ.<br><br>
❖ “ಗೋಲ್ಡನ್ ಅವರ್" ಎಂದರೆ ಸೈಬರ್ ವಂಚನೆಗೊಳಗಾದ ಹಣ ಬ್ಯಾಂಕ್ ಖಾತೆಗಳ ಮುಖಾಂತರ ಹರಿದು ಆರೋಪಿ ವಶಕ್ಕೆ ತಲುಪುವ ಸಮಯ" ಎಂದು ಹೇಳಲಾಗುತ್ತದೆ. ಇದು ಪ್ರಕರಣದಿಂದ ಪ್ರಕರಣಕ್ಕೆ ಬದಲಾಗುತ್ತದೆ. ವಂಚನೆಗೊಳಗಾದ ಮೊತ್ತವನ್ನು ಬ್ಯಾಂಕ್ ಖಾತೆಗಳಲ್ಲಿ ತತಕ್ಷಣ ಕಾರ್ಯಪ್ರವೃತ್ತರಾಗಿ</td>
</tr>
</table>

| | | |
|---|---|---|
| | | ತಡೆಹಿಡಿಯಲು "ಗೋಲ್ಡನ್ ಅವರ್" ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಹೊಸ ಮಾದರಿಯ ಆನ್ ಲೈನ್, ಸೈಬರ್ ವಂಚನೆಗಳ ತ್ವರಿತ ಮತ್ತು ತಾರ್ಕಿಕ ತನಿಖೆಯನ್ನು ಕೈಗೊಳ್ಳುವ ಸಲುವಾಗಿ ತನಿಖಾ ಕೈಪಿಡಿಯನ್ನು (New Cyber Investigation Manual) ಪ್ರಕಟಿಸಲಾಗಿದೆ.<br><br>❖ ಸೈಬರ್ ಕ್ರೈಂ ಅಪರಾಧಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ಬಹಳಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಎಲ್ಲಾ ವರ್ಗದ ಜನರಿಗೂ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಎಫ್.ಎಂ, ವಾಟ್ಸ್‌ಆಪ್ ಹಾಗೂ ಟ್ವಿಟರ್‌ಗಳ ಮೂಲಕ ಎಲ್ಲಾ ಮಾಧ್ಯಮಗಳ ಮುಖಾಂತರ ಸಹ ಸಾಮಾನ್ಯ ಜನರಿಗೆ ಅರಿವು ಮೂಡಿಸಲಾಗುತ್ತಿದೆ.<br><br>❖ ಪ್ರಮುಖ ಮೊಬೈಲ್ ಸರ್ವೀಸ್ ಪ್ರೊವೈಡರ್‌ಗಳ ಮುಖಾಂತರ ಕರೆಗಳು ಸ್ವೀಕರಿಸುವ ಮೊದಲು ಸೈಬರ್ ಅಪರಾಧಗಳ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ.<br><br>❖ ಸೈಬರ್ ಅಪರಾಧಗಳನ್ನು ನಿಯಂತ್ರಿಸಲು ಸಾರ್ವಜನಿಕರಲ್ಲಿ ಮ್ಯೂಲ್ ಅಕೌಂಟ್ ಪರಿಣಾಮಗಳ ಬಗ್ಗೆ ಹಾಗೂ ಕಾನೂನು ಕ್ರಮಗಳ ಬಗ್ಗೆ ಜಾಗೃತಿ ಮೂಡಿಲಾಗುತ್ತಿದೆ.<br><br>❖ ಸಾಮಾಜಿಕ ಜಾಲತಾಣಗಳಾದ ವಾಟ್ಸ್‌ಆಪ್, ಫೇಸ್‌ಬುಕ್, ಟ್ವಿಟರ್, ಇನ್‌ಸ್ಟಾಗ್ರಾಂ, ಟೆಲಿಗ್ರಾಂ ಹಾಗೂ ಇತರೆ ಜಾಲತಾಣಗಳಲ್ಲಿ ಐ.ಟಿ ಕಾಯ್ದೆ ಮತ್ತು ನಿಯಮಗಳನ್ನು ಉಲ್ಲಂಘಿಸುವ ಮತ್ತು ಸೈಬರ್ ಅಪರಾಧದಲ್ಲಿ ಭಾಗಿಯಾಗಿರುವ / ಭಾಗಿಯಾಗಬಹುದಾದ ಪೋಸ್ಟ್ ಗಳನ್ನು ನಿಯಮಾನುಸಾರ ನೋಟೀಸ್ ಜಾರಿ ಮಾಡಿ ಜಾಲತಾಣದಿಂದ ತೆಗೆದುಹಾಕುವ ಕ್ರಮಗಳನ್ನು ಕೇಂದ್ರ ಮತ್ತು ರಾಜ್ಯದ ಸಹಭಾಗಿತ್ವ ಸಂಸ್ಥೆಗಳ ಸಮನ್ವಯದೊಂದಿಗೆ ಕೈಗೊಳ್ಳಲಾಗುತಿದೆ. |

**ಸಂಖ್ಯೆ: ಹೆಚ್‌ಡಿ 11 ಪಿಸಿಕ್ಯೂ 2026**

**(ಡಾ: ಜಿ. ಪರಮೇಶ್ವರ)**
**ಗೃಹ ಸಚಿವರು**